KACD510028012022

Presented on : 02-12-2022
Registered on : 02-12-2022
Decided on : 01-04-2026
Duration : 3 years, 3 months, 30 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ದಿನಾಂಕಃ 01 ನೇ ಏಪ್ರಿಲ್ ಮಾಹೆ, 2026 ನೇ ಇಸವಿ**

**: ಉಪಸ್ಥಿತರು :**

ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್‌ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**ಅಸಲು ದಾವಾ ಸಂಖ್ಯೆಃ 561/2022**

**ಶ್ರೀ ದ್ಯಾಮಪ್ಪ ತಂದೆ ಲೇಟ್ ಗೂಳಿಹೊಸಹಳ್ಳಿ ಭೈರಪ್ಪ,**
ಸುಮಾರು 66 ವರ್ಷ,
ವ್ಯವಸಾಯ
ವಾಸ: ಕೆಂಕೆರೆ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು,

PRASANNAKUMAR C

Digitally signed by PRASANNAKUMAR C
Date: 2026.04.02 16:24:28 +0530

ಹಾಲಿ ವಾಸ: ವೇದಾವತಿ ನಗರ,
ಹಿರಿಯೂರು ಟೌನ್,
ಹಿರಿಯೂರು ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ. .....ವಾದಿ

**(ವಾದಿಯ ಪರವಾಗಿ ಶ್ರೀ ರಮೇಶ್ ಈ.ಟಿ, ವಕೀಲರು ಪ್ರತಿನಿಧಿಸಿರುತ್ತಾರೆ.)**

**ವಿರುದ್ಧ**

1. ಶ್ರೀಮತಿ ವಿಶಾಲ ಗಂಡ ಜಯಪ್ರಕಾಶ್
ಸುಮಾರು 35 ವರ್ಷ,
ಗೃಹಿಣಿ

2. ಶ್ರೀ ಚಂದ್ರಶೇಖರ ತಂದೆ ಹೊನ್ನವಳ್ಳಪ್ಪ,
ಸುಮಾರು 66 ವರ್ಷ
ವ್ಯವಸಾಯ

ಪ್ರತಿವಾದಿಯರಿಬ್ಬರೂ ವಾಸ:
ಕೆಂಕೆರೆ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು

.... ಪ್ರತಿವಾದಿಯರು

**(1 ನೇ ಪ್ರತಿವಾದಿಯ ಪರವಾಗಿ ಶ್ರೀ ಡಿ.ರಂಗಪ್ಪ, ವಕೀಲರು ಪ್ರತಿನಿಧಿಸಿರುತ್ತಾರೆ.)**
**(2 ನೇ ಪ್ರತಿವಾದಿ- ಏಕಪಕ್ಷೀಯ)**

| | | |
|---|---|---|
| ದಾವಾ ದಾಖಲಿಸಿದ ದಿನಾಂಕ | : | 01.12.2022 |
| ದಾವೆಯ ಸ್ವರೂಪ | : | ಶಾಶ್ವತ ನಿರ್ಬಂಧಕಾಜ್ಞೆ |
| ಸಾಕ್ಷಿಯ ವಿಚಾರಣೆಯನ್ನು ದಾಖಲು ಮಾಡಲು ಆರಂಭವಾದ ದಿನಾಂಕ | : | 19.08.2025 |
| ತೀರ್ಪು ಪ್ರಕಟಿಸಿದ ದಿನಾಂಕಃ | : | 01.04.2026 |
| ತೆಗೆದುಕೊಂಡ ಅವಧಿ | | 3 ವರ್ಷ, 3 ತಿಂಗಳು, 30 ದಿನಗಳು |

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

## ತೀರ್ಪು

ಪ್ರಸ್ತುತ ದಾವೆಯನ್ನು ವಾದಿ ಸಲ್ಲಿಸಿ, ದಾವಾ ಸ್ವತ್ತಾದ ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿ, ಕೆಂಕೆರೆ ಗ್ರಾಮದ ಮಾಡದಕೆರೆ ಗ್ರಾಮ ಪಂಚಾಯಿತಿ ಸಂಖ್ಯೆ 51/50 ರ ವಿಸ್ತೀರ್ಣ ಪೂರ್ವ-ಪಶ್ಚಿಮ 25 ಅಡಿಗಳು ಉತ್ತರ-ದಕ್ಷಿಣ 27 ಅಡಿಗಳ ಖಾಲಿ ನಿವೇಶನಕ್ಕೆ ಪ್ರತಿವಾದಿಯರುಗಳಾಗಲೀ ಅಥವಾ ಅವರ ಪರವಾಗಿ ಇತರೆ ಯಾವುದೇ ವ್ಯಕ್ತಿಯಾಗಲೀ ಯಾವುದೇ ರೀತಿಯಲ್ಲಿ ಅಡ್ಡಿ - ಆತಂಕ ಪಡಿಸದಂತೆ ಪ್ರತಿವಾದಿಯರ ಮತ್ತು ಅವರ ಕಡೆಯವರ ವಿರುದ್ದ ಶಾಶ್ವತ

ನಿರ್ಬಂಧಕಾಜ್ಞೆಯ ಆದೇಶದ ಮೂಲಕ ನಿರ್ಬಂಧಿಸಬೇಕಾಗಿ ಈ ದಾವೆಯಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

**ಈ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

2. ದಾವಾ ಆಸ್ತಿಗೆ ವಾದಿಯು ಕಾನೂನು ಬದ್ದ ಮಾಲೀಕರು, ಹಕ್ಕುದಾರ ಹಾಗೂ ಸ್ವಾಧಿನಾನುಭವದಾರನಾಗಿ ಅನುಭವಿಸುತ್ತಾ ಬಂದಿರುತ್ತಾರೆ. ವಾದಿಯು ದಾವಾ ಆಸ್ತಿಯನ್ನು ಅವರ ತಂದೆಯ ಮರಣಾ ನಂತರ ವಾರಸುದಾರಿಕೆಯ ಮುಖಾಂತರ ಪಡೆದುಕೊಂಡಿರುತ್ತಾರೆ. ವಾದಿಯು ದಾವಾ ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ದಿನದಿಂದ ಕಾನೂನುಬದ್ದ ಮಾಲೀಕರಾಗಿ ಮಾಡದಕೆರೆ ಗ್ರಾಮ ಪಂಚಾಯಿತಿಗೆ ಕಾಲಕಾಲಕ್ಕೆ ತೆರಿಗೆ ಪಾವತಿಸುತ್ತಾ ಕಾನೂನು ಬದ್ದ ಮಾಲೀಕ, ಹಕ್ಕುದಾರ ಮತ್ತು ಸ್ವಾಧೀನಾನುಭದಾರನಾಗಿ ಅನುಭವಿಸುತ್ತಾ ಬಂದಿರುತ್ತಾರೆ. ಇಂದಿಗೂ ದಾವಾ ಸ್ವತ್ತು ವಾದಿಯ ತಂದೆ ಗೂಳಿಹೊಸಳ್ಳಿ ಭೈರಪ್ಪ ರವರ ಹೆಸರಿನಲ್ಲಿಯೆ ಇರುತ್ತದೆ. ವಾದಿಯು ದಾವಾ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಬದಲಾಯಿಸಲು ಪಿ.ಡಿ.ಓ. (P.D.O.) ರವರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಅದು ಬಾಕಿ ಇರುತ್ತದೆ. ದಾವಾ ಸ್ವತ್ತು ಒಟ್ಟು ಪೂರ್ವ-ಪಶ್ಚಿಮವಾಗಿ 25 ಅಡಿ ಮತ್ತು ಉತ್ತರ-ದಕ್ಷಿಣ 27 ಅಡಿಗಳು ಇದ್ದು ಅದರಲ್ಲಿ ವಾದಿ ಮತ್ತು ಅವರ ತಂದೆ ಪೂರ್ವ ಭಾಗಕ್ಕೆ 6 ಅಡಿ ಮತ್ತು ಪಶ್ಚಿಮ ಭಾಗಕ್ಕೆ 1 ಅಡಿ ಜಾಗವನ್ನು ಬಿಟ್ಟು, ಪೂರ್ವ-ಪಶ್ಚಿಮ 18 ಅಡಿ ಮತ್ತು ಉತ್ತರ-ದಕ್ಷಿಣ 11 ಅಡಿ ವಿಸ್ತೀರ್ಣದಲ್ಲಿ ವಾಸದ ಮನೆಯನ್ನು ನಿರ್ಮಿಸಿದ್ದು ಮನೆಯ ದಕ್ಷಿಣ ಭಾಗದಲ್ಲಿ 14 ಅಡಿ ಜಾಗವನ್ನು ಬಿಟ್ಟಿದ್ದು, ಆ 14 ಅಡಿ ಜಾಗದಲ್ಲಿ ತಮ್ಮ ದನ ಕರುಗಳನ್ನು ಕಟ್ಟಲು ಮತ್ತು ಕೃಷಿ ಉಪಕರಣಗಳನ್ನು ಸಂಗ್ರಹಿಸಲು ಶೆಡ್

ಅನ್ನು ನಿರ್ಮಿಸಿಕೊಂಡು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಶಾಂತಿಯುತವಾಗಿ ಅನುಭವಿಸುತ್ತಿರುತ್ತಾರೆ.

3. ವಾದಿ ಮುಂದುವರೆದು ತಮ್ಮ ವಾದ ಪತ್ರದಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ವಸ್ತುಸ್ಥಿತಿ ಹೀಗಿರುವಾಗ, ಪ್ರತಿವಾದಿಯರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಮತ್ತು ಸ್ವಾಧೀನಾನುಭವ ಇರುವುದಿಲ್ಲಾ. ಪ್ರತಿವಾದಿಯರ ಯಾವುದೇ ಸ್ವತ್ತು ದಾವಾ ಸ್ವತ್ತಿನ ಬಳಿ ಇಲ್ಲದಿದ್ದರೂ ದಾವಾ ಸ್ವತ್ತಿನ ಬಳಿ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಡಲು ಹಾಗೂ ವಾದಿಯನ್ನು ಹೊರ ಹಾಕಲು ಪ್ರಯತ್ನಿಸಿರುತ್ತಾರೆ ಪ್ರತಿವಾದಿಯ ಈ ಕೃತ್ಯವು ನೈಸರ್ಗಿಕ ಕಾನೂನಿಗೆ ವಿರುದ್ಧವಾಗಿರುದ್ದು, ಪ್ರತಿವಾದಿಯರ ಈ ವರ್ತನೆಯನ್ನು ಕಂಡು ಗ್ರಾಮದ ಹಿರಿಯರ ಮುಖಾಂತರ ಬುದ್ದಿವಾದ ಹೇಳಿಸಿದರೂ ಪ್ರಯೋಜನವಾಗಿರುವುದಿಲ್ಲ. ಪ್ರತಿವಾದಿಯರು ರಾಜಕೀಯ ಪ್ರೇರಿತ ವ್ಯಕ್ತಿಯಾಗಿದ್ದು, ರಾತ್ರೋರಾತ್ರಿ ವಾದಿಯನ್ನು ದಾವಾ ಆಸ್ತಿಯಿಂದ ಹೊರಹಾಕುವುದಾಗಿ ಬಹಿರಂಗವಾಗಿ ಬೆದರಿಕೆ ಹಾಕಿರುತ್ತಾರೆ. ಪ್ರತಿವಾದಿಯು ಹಣವಂತ ಮತ್ತು ಸ್ಥಳೀಯವಾಗಿ ಹೆಚ್ಚಿನ ಬೆಂಬಲ ಹೊಂದಿರುವ ವ್ಯಕ್ತಿಯಾಗಿದ್ದಾರೆ, ಆದರೆ ವಾದಿಗೆ ಯಾವುದೇ ಬೆಂಬಲವಿರುವುದಿಲ್ಲ ಆದ್ದರಿಂದ ನ್ಯಾಯಾಲಯದ ಮಧ್ಯ ಪ್ರವೇಶವಿಲ್ಲದೇ ಅವರನ್ನು ನಿರ್ಬಂಧಿಸುವುದು, ವಾದಿಯಗೆ ಸಾಧ್ಯವಾಗದ ಕಾರಣ, ಮೇಲಿನಂತೆ ಸೂಕ್ತ ಪರಿಹಾರ ಕೋರಿ ಈ ದಾವಾ ತಂದಿರುತ್ತಾರೆ.

4. ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಯರ ವಾದ ಪತ್ರದಲ್ಲಿರುವ ಅಂಶವನ್ನು ಅಲ್ಲಗಳೆಯುವ ಸಲುವಾಗಿ ಪ್ರತಿವಾದಿಗಳಿಗೆ ನ್ಯಾಯಾಲಯದಿಂದ

ಸಮನ್ಸನ್ನು ಜಾರಿ ಮಾಡಿದ್ದು, ಸದರಿ ಸಮನ್ಸ್ ಪ್ರತಿವಾದಿಗಳಿಗೆ ತಲುಪಿದರೂ ಸಹ, ನ್ಯಾಯಾಲಯವು ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ, 2 ನೇ ಪ್ರತಿವಾದಿ ಹಾಜರಾಗಿರುವುದಿಲ್ಲ. ಆದ್ದರಿಂದ ಅವರ ವಿರುದ್ಧ ಏಕಪಕೀಯ ಆದೇಶ ಆಗಿರುತ್ತದೆ. 1 ನೇ ಪ್ರತಿವಾದಿಯು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಸಾಕಷ್ಟು ಕಾಲಾವಕಾಶಗಳನ್ನು ನೀಡಿದ್ದರೂ ಸಹ ತನ್ನ ಪರವಾಗಿ ಯಾವುದೇ ರೀತಿಯ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

5. ಈ ನ್ಯಾಯಾಲಯವು ವಾದಿಯ ವಾದ ಪತ್ರವನ್ನು ಆಧರಿಸಿ ಈ ದಾವೆಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳನ್ನು ರೂಪಿಸಿರುತ್ತದೆ.

**ಅಂಶಗಳು**

1. ವಾದಿಯು ದಾವಾದಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ?
2. ಯಾವ ಆದೇಶ?

6. ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನೇ ಪಿಡಬ್ಲ್ಯೂ -1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ 3 ದಾಖಲೆಗಳನ್ನು ಹಾಜರುಪಡಿಸಿ, ನಿಪಿ-1 ರಿಂದ ನಿಪಿ-8 ರವರೆಗೆ ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ 1 ನೇ ಪ್ರತಿವಾದಿಯರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ, ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ, ತಮ್ಮಗಳ ಪರವಾಗಿ ಯಾರೊಬ್ಬ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ, ಯಾವುದೇ

ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ ಹಾಗೂ ಪಿಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೂ ಸಹ ಒಳಪಡಿಸಿರುವುದಿಲ್ಲ.

7. ವಾದವನ್ನು ಆಲಿಸಲಾಯಿತು.

8. ನ್ಯಾಯಾಲಯವು ವಾದಿಯ ವಾದ ಪತ್ರ, ಮಂಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯ ಹಾಗೂ ಕಡತದಲ್ಲಿ ಲಭ್ಯವಿರುವ ಎಲ್ಲಾ ಪುರಾವೆಗಳನ್ನು ಪರಿಗಣನೆಗೆ ತೆಗೆದುಕೊಂಡು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶಃ 1 : ಸಕಾರಾತ್ಮಕವಾಗಿ

ಅಂಶಃ 2 : ಈ ಕೆಳಕಂಡ ಕಾರಣಗಳಿಗಾಗಿ

ಅಂತಿಮ ಆದೇಶದ ಪ್ರಕಾರ

**ಕಾರಣಗಳು**

**ಒಂದನೆ ಅಂಶಃ**

9. ಈ ದಾವೆಯಲ್ಲಿ ವಾದಿಯು ದಾವಾ ಅನುಸೂಚಿ ಆಸ್ತಿಯ ಶಾಂತಿಯುತವಾದ ಸ್ವಾಧೀನಾನುಭವಕ್ಕೆ ಪ್ರತಿವಾದಿಯರಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಬೇರೆ ಯಾರೇ ಆಗಲಿ ಅಡ್ಡಿ-ಆತಂಕ ಪಡಿಸದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶ ಮಾಡಬೇಕಾಗಿ ಕೋರಿರುತ್ತಾರೆ.

10. ವಾದಿಯು ತನ್ನ ವಾದ ಪತ್ರದಲ್ಲಿನ ವಿಷಯಗಳನ್ನು ರುಜುವಾತುಪಡಿಸುವ ಸಲುವಾಗಿ ತನ್ನನ್ನೇ ಪಿಡಬ್ಲ್ಯೂ-1 ಸಾಕ್ಷಿ ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿರುವ

ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಅಲ್ಲದೇ ವಾದಿಯ ಪರವಾಗಿ 8 ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ನಿಪಿ-1 ಹೌಸ್ ಲಿಸ್ಟ್ ರಿಜಿಸ್ಟರ್ ವಹಿ, ನಿಪಿ-2 ಅಸಲು ದಾವಾ ಸಂಖ್ಯೆ 98/2017 ರ ಅದೇಶ ಪುಟಗಳ ದೃಡೀಕೃತ ನಕಲು, ನಿಪಿ-3 ಅಸಲು ದಾವಾ ಸಂಖ್ಯೆ 98/2017 ರ ತೀರ್ಪಿನ ದೃಡೀಕೃತ ನಕಲು, ನಿಪಿ-4 ಅಸಲು ದಾವಾ ಸಂಖ್ಯೆ 98/2017 ರ ಡಿಕ್ರಿಯ ದೃಡೀಕೃತ ನಕಲು, ನಿಪಿ-5 ಅಸಲು ದಾವಾ ಸಂಖ್ಯೆ 98/2017 ರ ವಾದ ಪತ್ರದ ದೃಡೀಕೃತ ನಕಲು, ನಿಪಿ-6 ಅಸಲು ದಾವಾ ಸಂಖ್ಯೆ 98/2017 ರ ಪಿಡಬ್ಲ್ಯೂ-1 ರವರ ಸಾಕ್ಷಿ ವಿಚಾರಣೆಯ ದೃಡೀಕೃತ ನಕಲು, ನಿಪಿ-7 ಪಟ್ಟಾ ಪುಸ್ತಕದ ದೃಢೀಕೃತ ನಕಲು, ನಿಪಿ-8 ಕಂದಾಯ ಪಾವತಿಯ ರಶೀದಿಗಳ ದೃಢೀಕೃತ ನಕಲುಗಳಾಗಿರುತ್ತವೆ. ಇದಕ್ಕೆ ಪ್ರತಿಯಾಗಿ 1 ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ತಮ್ಮ ನಿಲುವನ್ನು ಮಂಡಿಸಲು ತಮ್ಮ ಪರವಾಗಿ ಯಾರೊಬ್ಬ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ. ಅಲ್ಲದೇ ಪಿಡಬ್ಲ್ಯೂ-1 ರವರ ಪಾಟೀ ಸವಾಲನ್ನು ಮಾಡದೇ ದಾವೆಯನ್ನು ವಿರೋಧಿಸಿರುವುದಿಲ್ಲ.

11. ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಹಾಗೂ ಪಿಡಬ್ಲ್ಯೂ-1 ಆಗಿ ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವನ್ನು ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳನ್ನು ಹಾಗೂ ವಾದಿಯ ಪರ ವಕೀಲರು ಮಂಡಿಸಿದ ವಾದವನ್ನು ಕೂಲಂಕುಷವಾಗಿ ವಿಮರ್ಶೆ ಮಾಡಿದ ನಂತರ, ದಾವಾ ಅನುಸೂಚಿ ಸ್ವತ್ತು ವಾದಿಯ ಸ್ವಾಧೀನಾನುಭವದಲ್ಲಿರುವುದು

ವಾದಿಯು ಹಾಜರುಪಡಿಸಿರುವ ನಿಪಿ-1 ರ ಹೌಸ್ ಲಿಸ್ಟ್ ರಿಜಿಸ್ಟರ್ ಮತ್ತು ನಿಪಿ-7 ರ ಪಟ್ಟಾ ಪುಸ್ತಕದ ನಕಲು ಹಾಗೂ ನಿಪಿ-8 ಕಂದಾಯ ಪಾವತಿಯ ರಷೀದಿಗಳನ್ನು ಗಮನಿಸಿದಾಗ ದಾವಾ ಸ್ವತ್ತು ವಾದಿಯ ತಂದೆ ಗೂಳಿಹೊಸಹಳ್ಳಿ ಬೈರಪ್ಪ ರವರ ಹೆಸರಿನಲ್ಲಿರುವುದು ಕಂಡು ಬರುತ್ತದೆ. ಇದರಿಂದ ವಾದಿಯು ಪ್ರಸ್ತುತ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೇ, ನಿಪಿ-2 ರಿಂದ ನಿಪಿ-6 ರ ಅಸಲು ದಾವಾ ಸಂಖ್ಯೆ 98/2017 ರ ಅದೇಶ ಪುಟಗಳು, ತೀರ್ಪಿನ ಪ್ರತಿ, ಡಿಕ್ರಿ, ವಾದ ಪತ್ರ ಮತ್ತು ಸಾಕ್ಷಿ ವಿಚಾರಣೆಯ ಪ್ರಮಾಣ ಪತ್ರಗಳನ್ನು ಗಮನಿಸಿದಾಗ ವಾದಿಯು ಮಾನ್ಯ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೊಸದುರ್ಗ ದಲ್ಲಿ ಈಗಾಗಲೇ ದಾವಾ ಸ್ವತ್ತಿನ ಮೇಲೆ ತನ್ನ ಪರವಾಗಿ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವ ಬಗ್ಗೆ ಡಿಕ್ರಿ ಪಡೆದಿರುವುದು ಕಂಡುಬರುತ್ತದೆ. ಆದ್ದರಿಂದ ವಾದಿಯು ದಾವಾ ಆಸ್ತಿಯ ಕಾನೂನ ಬದ್ದ ಮಾಲೀಕ ಸ್ವಾಧೀನಾನುಭವದಾರ ಎಂಬುದು ಸಾಬೀತಾಗಿರುತ್ತದೆ.

12. ಮುಂದುವರೆದು, ವಾದಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ವಾದ ಪತ್ರದಲ್ಲಿ ಪ್ರತಿವಾದಿಯರು ದಾವಾ ಆಸ್ತಿಯ ಮೇಲೆ ಹಕ್ಕು, ಸ್ವಾಧೀನ, ಹಿತಾಸಕ್ತಿ ಇಲ್ಲದಿದ್ದರೂ ದಾವಾ ಸ್ವತ್ತಿನ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡುತ್ತಾರೆ ಎಂದು ನುಡಿಯುತ್ತಾರೆ. ಆದಕಾರಣ, ಪ್ರತಿವಾದಿಯರ ಸದರಿ ತಂಟೆ ತಕರಾರು ಈಗಲೂ ಮುಂದುವರೆಯುತ್ತಿರುವುದು ಕಂಡು ಬರುತ್ತದೆ. ಆದರೆ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಅಲ್ಲಗಳೆಯುವ ಸಲುವಾಗಿ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಕಳುಹಿಸಿದ್ದು, ಸದರಿ ಸಮನ್ಸ್ 2 ನೇ

ಪ್ರತಿವಾದಿಗೆ ಜಾರಿಯಾಗಿದ್ದು ಅವರ ವಿರುದ್ಧ ಏಕಪಕ್ಷೀಯ ಆದೇಶವಾಗಿರುತ್ತದೆ, 1 ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ಹಾಗೂ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸಾಕಷ್ಟು ಕಾಲವಕಾಶ ನೀಡಿದ್ದರೂ ಸಹಾ ವಾದಿಯು ತನ್ನ ವಾದ ಪತ್ರದಲ್ಲಿ ತೆಗೆದುಕೊಂಡಿರುವ ನಿಲುವನ್ನು ಪ್ರತಿರೋಧಿಸುವ ಸಲುವಾಗಿ 1 ನೇ ಪ್ರತಿವಾದಿ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ ವಾದಿಯು ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶವನ್ನು ಅಲ್ಲಗಳೆಯಲು ವಾದಿಯ ಪರ ಪಿಡಬ್ಲ್ಯೂ-1 ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ತಮ್ಮಗಳ ಪರವಾಗಿ ಯಾವುದೇ ಸಾಕ್ಷ್ಯವನ್ನು ವಿಚಾರಣೆ ಮಾಡುವುದಾಗಲೀ ಅಥವಾ ಯಾವುದೇ ದಾಖಲೆಗಳನ್ನು ತಮ್ಮಗಳ ಪರವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಿಶಾನೆಗೆ ಗುರುತಿಸಿಕೊಳ್ಳುವಲ್ಲಿ ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಆದ್ದರಿಂದ ಪ್ರತಿವಾದಿಯರಿಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ದಾವಾ ಆಸ್ತಿಯ ಮೇಲೆ ಇರುವುದಿಲ್ಲ ಎಂದು ಕಂಡುಬರುತ್ತದೆ. ವಾದಿ ಪರ ಸಾಕ್ಷಿದಾರರು ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ ಆತಂಕ ಉಂಟು ಮಾಡುತ್ತಿರುವ ಬಗ್ಗೆ ಸಾಕ್ಷ್ಯ ನುಡಿದಿದ್ದು ಅದನ್ನು ಅಲ್ಲಗಳೆಯುವಂತಹ ಯಾವುದೇ ವಿರುದ್ಧ ಸಾಕ್ಷಿ ಲಭ್ಯವಿರುವುದಿಲ್ಲ.

13. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ವಾದಿಯು ನ್ಯಾಯಾಲಯದ ಮುಂದೆ ಸಲ್ಲಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯದ ಮೂಲಕ ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಪ್ರತಿವಾದಿಯರು ತಂಟೆ-ತಕರಾರು ಮಾಡಲು ಪ್ರಯತ್ನಿಸುತ್ತಿರುವುದಾಗಿ ರುಜುವಾತುಪಡಿಸಲು ಸಹ

ಸಫಲರಾಗಿರುತ್ತಾರೆ. ಆದ್ದರಿಂದ ವಾದಿಯು ಸದರಿ ದಾವಾದಲ್ಲಿ ಡಿಕ್ರಿ ಪಡೆಯಲು ಅರ್ಹರಾಗಿರುತ್ತಾರೆ. ಆದ ಕಾರಣ ನ್ಯಾಯಾಲಯವು ಅಂಶಃ1 ನ್ನು ***<u>ಸಕಾರಾತ್ಮಕವಾಗಿ</u>*** ಉತ್ತರಿಸುತ್ತದೆ.

**<u>ಎರಡನೆ ಅಂಶಃ</u>**

14. ಈ ಮೇಲ್ಕಂಡ ಅಂಶದಲ್ಲಿ ಚರ್ಚಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶಃ

**<u>ಆದೇಶ</u>**

- ವಾದಿಯ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಿ ಡಿಕ್ರಿ ಮಾಡಲಾಗಿದೆ.
- ಮುಂದುವರೆದು, ಪ್ರತಿವಾದಿಯರುಗಳಾಗಲೀ ಅಥವಾ ಅವರ ಕಡೆಯವರಾಗಲೀ ದಾವಾ ಅನುಸೂಚಿ ಸ್ವತ್ತಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಯಾವುದೇ ರೀತಿಯಿಂದ ಅಡ್ಡಿ-ಆತಂಕ ತೊಂದರೆ ಪಡಿಸದಂತೆ ಸದರಿ ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಿ ಆದೇಶಿಸಲಾಗಿದೆ.
- ಇದರಂತೆ ಡಿಕ್ರಿಯನ್ನು ಬರೆಯತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 1 ನೇ ಏಪ್ರಿಲ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**-ಅನುಬಂಧ-**

**ವಾದಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

ಪಿಡಬ್ಲ್ಯೂ -1 : ದ್ಯಾಮಪ್ಪ

**ವಾದಿಯರ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ**

ನಿಪಿ-1 - ಹೌಸ್ ಲಿಸ್ಟ್ ರಿಜಿಸ್ಟರ್ ವಹಿ

ನಿಪಿ-2 - ಅಸಲು ದಾವಾ ಸಂಖ್ಯೆ 98/2017 ರ ಅದೇಶ ಪುಟಗಳ ದೃಡೀಕೃತ ನಕಲು

ನಿಪಿ-3 - ಅಸಲು ದಾವಾ ಸಂಖ್ಯೆ 98/2017 ರ ತೀರ್ಪಿನ ದೃಡೀಕೃತ ನಕಲು

ನಿಪಿ-4 - ಅಸಲು ದಾವಾ ಸಂಖ್ಯೆ 98/2017 ರ ಡಿಕ್ರಿಯ ದೃಡೀಕೃತ ನಕಲು

ನಿಪಿ-5 - ಅಸಲು ದಾವಾ ಸಂಖ್ಯೆ 98/2017 ರ ವಾದ ಪತ್ರದ ದೃಡೀಕೃತ ನಕಲು

ನಿಪಿ-6 - ಅಸಲು ದಾವಾ ಸಂಖ್ಯೆ 98/2017 ರ ಪಿಡಬ್ಲ್ಯೂ-1 ರವರ ಸಾಕ್ಷಿ ವಿಚಾರಣೆಯ ದೃಡೀಕೃತ ನಕಲು

ನಿಪಿ-7- ಪಟ್ಟಾ ಪುಸ್ತಕದ ದೃಢೀಕೃತ ನಕಲು

ನಿಪಿ-8- ಕಂದಾಯ ಪಾವತಿಯ ರಶೀದಿಗಳ ದೃಢೀಕೃತ ನಕಲು

**ಪ್ರತಿವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

ಇಲ್ಲಾ

**ಪ್ರತಿವಾದಿಯರ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ**

ಇಲ್ಲಾ

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.